	ಬ್ರಹ್ಮಾವರ		
10	ಹೊಡೆ ಕೆಮ್ಮಣ್ಣು	0.945	
11	ಕೋಡಿ ಬೆಂಗ್ರೆ	0.150	
12	ಹೊಸ ಬೆಂಗ್ರೆ	0.000	
13	ಕೋಡಿ ಕನ್ಯಾನ	0.850	
14	ಪರಂಪಳ್ಳಿ ಪಡುಕೆರೆ	0.700	
15	ಕೊಟಕಟ್ಟು	1.270	
16	ಮಣೂರು ಪಡುಕೆರೆ	0.850	5.565
	ಕುಂದಾಪುರ		
17	ಬಿಜಾಡಿ	0.450	
18	ಕಡಬಕೋಡಿ	0.440	0.890
	ಬೈಂದೂರು		
19	ಮರವಂತೆ	1.050	
20	ನಾವುಂದಾ	0.400	
21	ಅದ್ರಗೋಳಿ	0.600	
22	ಹೊಸಹಿತ್ಲು	0.850	
23	ಗಂಗೆ ಬೈಲು	0.100	
24	ಉಪ್ಪುಂದ ಅಮ್ಮನವರ ತೊಪ್ಪಲು	0.975	
25	ಆಳ್ವೆ ಕೋಡಿ	1.370	
26	ಕಳಿ ಹಿತ್ಲು	0.600	
27	ಪಡುವರಿಯಲ್ಲ	1170.00	7.115
		21.355	

ಈ) ಯೋಜನೆಗಳು ವಿಳಂಬವಾಗಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಆಗುವ ನಷ್ಟವನ್ನು ಗಂಭೀರವಾಗಿ ಪರಿಗಣಿಸಿದ್ದು NCPP ಯೋಜನೆಗೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ಪಡೆಯುವ ಬಗ್ಗೆ ಸರ್ಕಾರದ ಮಟ್ಟದ ಗಂಭೀರ ಪ್ರಯತ್ನ ನಡೆಯುತ್ತಿದೆ. ಉಳಿದ ಯೋಜನೆಗಳನ್ನು ಆದಷ್ಟು ತೀವ್ರ ಅನುಷ್ಠಾನಗೊಳಿಸುವ ಬಗ್ಗೆ ಪ್ರಯತ್ನ ನಡೆಯುತ್ತಿದೆ.

5257(5145) ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ (ಕುಂದಾಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ಜಿಲ್ಲೆಯಲ್ಲಿ ಗೇರು ಕೃಷಿ ಅಭಿವೃದ್ಧಿಗಾಗಿ ಎಷ್ಟು ಮಂದಿ ರೈತರಿಗೆ ಯಾವ ವರ್ಷದಲ್ಲಿ ಲೀಸ್ ಆಧಾರದ ಮೇಲೆ ನೀಡಲಾದ ಜಮೀನಿನ ವಿಸ್ತೀರ್ಣವೆಷ್ಟು;

ಆ) ಲೀಸ್‌ನಲ್ಲಿ ವಿಧಿಸಿದ ಷರತ್ತನ್ನು ಎಷ್ಟು ಮಂದಿ ರೈತರು ಪೂರೈಸಿದ್ದಾರೆ;

ಇ) ಷರತ್ತು ಪೂರೈಸಿದ ರೈತರಿಗೆ ಸರ್ಕಾರ ಹಕ್ಕುಪತ್ರ ನೀಡಲಾಗಿದೆಯೇ;

ಈ) ನೀಡಿದ್ದಲ್ಲಿ, ಎಷ್ಟು ಮಂದಿ ರೈತರಿಗೆ ಹಕ್ಕು ಪತ್ರ ನೀಡಲಾಗಿದೆ; ಉಳಿದವರಿಗೆ ಹಕ್ಕು ಪತ್ರ ನೀಡದೇ ಇರಲು ಕಾರಣವೇನು;

ಉ) ಷರತ್ತು ಪೂರೈಸಿದ, ಉಳಿದ ರೈತರಿಗೆ ಯಾವಾಗ ಹಕ್ಕು ಪತ್ರ ನೀಡಲಾಗುವುದು?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ಉಡುಪಿ ಜಿಲ್ಲೆಯಲ್ಲಿ 1958 ರಿಂದ 1960 ವರೆಗೆ ಗೇರು ಕೃಷಿ ಅಭಿವೃದ್ಧಿಗಾಗಿ ಲೀಸ್ ಆಧಾರದಲ್ಲಿ ಜಮೀನು ನೀಡಿರುವ ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

ತಾಲ್ಲೂಕಿನ ಹೆಸರು	ಲೀಜ್‌ಗೆ ನೀಡಿದ ಪ್ರಕರಣಗಳ ಸಂಖ್ಯೆ	ವಿಸ್ತೀರ್ಣ ಎಕರೆಗಳಲ್ಲಿ
ಕುಂದಾಪುರ	182	956.60
ಉಡುಪಿ	46	223.57
ಕಾರ್ಕಳ	115	969.56
ಒಟ್ಟು	**343**	**2149.73**

ಆ) ಉಡುಪಿ ಜಿಲ್ಲೆಯಲ್ಲಿ ಗೇರು ಕೃಷಿಗೆ ನೀಡಲಾದ ಪ್ರಕರಣದಲ್ಲಿ ಲೀಸ್‌ನಲ್ಲಿ ವಿಧಿಸಿದ ಷರತ್ತನ್ನು 334 ಮಂದಿ ರೈತರು ಪೂರೈಸಿದ್ದಾರೆ.

ಇ) ಷರತ್ತು ಪೂರೈಸಿದ ರೈತರ ಪೈಕಿ ಒಟ್ಟು 30 ಪ್ರಕರಣಗಳಲ್ಲಿ ಗೇರು ಕೃಷಿ ಜಮೀನನ್ನು ಖಾಯಂ ಮಂಜೂರಾತಿ ನೀಡಲಾಗಿದೆ. ಈ ಪೈಕಿ ಕುಂದಾಪುರ ತಾಲ್ಲೂಕಿನಲ್ಲಿ 1, ಉಡುಪಿ ತಾಲ್ಲೂಕಿನಲ್ಲಿ 7, ಕಾರ್ಕಳ ತಾಲ್ಲೂಕಿನಲ್ಲಿ 8, ಮಂದಿ ಸೇರಿ 16 ಜನರಿಗೆ ಹಕ್ಕುಪತ್ರ ನೀಡಲಾಗಿರುತ್ತದೆ. ಉಳಿದವರು ಭೂ ಮೌಲ್ಯ ಪಾವತಿಸದೆ ಇರುವುದರಿಂದ ಮತ್ತು ಭೂಮೌಲ್ಯದ ಕುರಿತು ನ್ಯಾಯಾಲಯಕ್ಕೆ ಹೋಗಿರುವುದರಿಂದ, ಹಕ್ಕು ಪತ್ರ ನೀಡಲು ಅನಾನುಕೂಲವಾಗಿದೆ.

ಉ) ಷರತ್ತು ಪೂರೈಸಿದ ಪ್ರಕರಣಗಳಲ್ಲಿ ಸರ್ಕಾರ ಸುತ್ತೋಲೆ ಸಂ: ಆರ್‌ಡಿ 33 ಎಲ್‌ಜಿಪಿ 2001. ದಿನಾಂಕ : 24.08.2001ರಂತೆ ಸಮಾನ ರೀತಿಯ ಬಂಜರು ಜಮೀನಿನ ಬೆಲೆ ಪಾವತಿಸಿದಲ್ಲಿ ಅಂತಹ ರೈತರಿಗೆ ಶೀಘ್ರವಾಗಿ ಹಕ್ಕುಪತ್ರ ನೀಡಲಾಗುವುದು.

5258(5146) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭೂ ಪರಿವರ್ತನೆ ಕಾಯ್ದೆ ಅನ್ವಯ, ಪಟ್ಟಾ ಜಮೀನನ್ನು ತಹಶೀಲ್ದಾರರು ಮತ್ತು ಡಿಕ್ಲರೇಷನ್ ಜಮೀನನ್ನು ಜಿಲ್ಲಾಧಿಕಾರಿಗಳು, ಮನೆ ಕಟ್ಟಲು ಹಾಗೂ ವಾಣಿಜ್ಯ ಉದ್ದೇಶಗಳಿಗೆ ಭೂಪರಿವರ್ತನೆ ಮಂಜೂರಾತಿ ನೀಡುತ್ತಿದ್ದು, ಈ ಬಗ್ಗೆ ತಾರತಮ್ಯ ಮಾಡಿರುವುದಕ್ಕೆ ಕಾರಣವೇನು;

ಆ) ಡಿಕ್ಲರೇಷನ್ ಭೂಮಿಗಳ ಭೂ ಪರಿವರ್ತನೆಯನ್ನು ಮಾಡುವ ಅಧಿಕಾರವನ್ನು ಸರ್ಕಾರ ತಹಶೀಲ್ದಾರರಿಗೆ ನೀಡಿ, ರೈತರಿಗೆ ಮತ್ತು ಗ್ರಾಮೀಣ ಜನರಿಗೆ ಸಹಾಯ ಮಾಡುವುದೇ?